

## ನಕ್ಕು ಬಿಡಿ



ರವಿ: ಸೆಲ್ಫಿ ತೆಗೆಯೋದ್ರಲ್ಲಿ ನಮ್ಮ ರಾಜುನ ಮೀರಿಸೋರು ಯಾರೂ ಇಲ್ಲ ಬಿಡು....

ರಮೇಶ್: ಅದ್ಹೇಗೆ ಹೇಳ್ತಿಯಾ?!

ರವಿ: ತನ್ನ ಮದುವೆಯಲ್ಲಿ ತಾಳಿ ಕಟ್ಟೋ ಸಂದರ್ಭದಲ್ಲಿಯೂ ಸೆಲ್ಫಿ ತಕ್ಕೊಂಡ ಕಣೋ!

★★★

ಅದೇ ತಾನೆ ಹಾಸಿಗೆಯಿಂದ ಎದ್ದ ಗಂಡನಿಗೆ ಹೆಂಡತಿ ದಿನಪತ್ರಿಕೆ ಕೊಡುವಂತೆ ಕೇಳಿದಳು....

ಗಂಡ: ನೀನೆಷ್ಟು ಹಿಂದೆ ಇದ್ದೀಯಾ! ತಂತ್ರಜ್ಞಾನ ಎಷ್ಟೊಂದು ಬೆಳೆದಿದೆ. ನೀನಿನ್ನು ದಿನಪತ್ರಿಕೆ ಕೇಳ್ತಾ ಇದ್ದೀಯಾ? ನನ್ನ ಟ್ಯಾಬ್ ತಗೋ....

ಹೆಂಡತಿ ಗಂಡನ ಟ್ಯಾಬ್ ತೆಗೆದುಕೊಂಡು ನೆಲದಲ್ಲಿದ್ದ ಜಿರಲೆಗೆ ಒಂದೇಟು ಬಡಿದು ಕೊಂದೇ ಹಾಕಿದಳು.

★★★

ರೋಹಿಣಿ: ಏನೇ ಕರಾಟೆ ಬೆಲ್ಟ್ ಹಾಕಿಕೊಂಡೇ ತಿರುಗ್ತಾ ಇರ್ತೀಯಲ್ಲೇ, ನಿನಗೆ ನಿಜಕ್ಕೂ ಕರಾಟೆ ಬರುತ್ತಾ?

ರಾಗಿಣಿ: ಕರಾಟೆ ಬರೊಲ್ಲ ಕಣೆ, ಆದ್ರೆ ಯಾರೂ ನನ್ನ ತಂಟೆಗೆ ಬರಬಾರದು ಅಂತ ಈ ವೇಷ ಅಷ್ಟೇ!

★★★

ರಾಜು: ಯಾಕೋ ಫೇಸ್ ಬುಕ್‌ನಲ್ಲಿ ಕಾಣ್ತಾನೇ ಇಲ್ವಲ್ಲ?

ರಘು: ಫೇಸ್ ಟು ಫೇಸ್ ದಿನವೂ ಕಂಡ್ರೇನೇ ನೀನು ಮಾತಾಡೊಲ್ಲ. ಅಲ್ಲಿ ವಿಚಾರಿಸಿ ಏನು ಮಾಡ್ತೀಯಾ?

★★★

ಭಾರತ ಕಂಡ ಅತ್ಯದ್ಭುತ ದ್ವಿಶತಕಗಳು:
ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ರೋಹಿತ್ ಶರ್ಮ ಮತ್ತು ತೊಗರಿಬೇಳೆ!

★★★

ಮಹಿಳೆಯೊಬ್ಬಳು ನಿಮ್ಮನ್ನು ಪ್ರೀತಿಸಿದರೆ, ನೀವೊಬ್ಬ ಪತಿ... ಬಹಳ ಮಹಿಳೆಯರು ನಿಮ್ಮನ್ನು ಪ್ರೀತಿಸಿದರೆ, ನೀವೊಬ್ಬ ನಟ.., ನೂರಾರು ಮಹಿಳೆಯರು ನಿಮ್ಮನ್ನು ಪ್ರೀತಿಸಿದರೆ, ನೀನೊಂದು ಗೊಂಬೆ... ಸಾವಿರಾರು ಮಹಿಳೆಯರು ನಿಮ್ಮನ್ನು ಪ್ರೀತಿಸಿದರೆ, ನೀನೊಬ್ಬ ಜನನಾಯಕ.... ಆದ್ರೆ, ನಗರದ ಎಲ್ಲಾ ಮಹಿಳೆಯರು ನಿಮ್ಮನ್ನು ಪ್ರೀತಿಸಿದರೆ ಖಂಡಿತ ನೀವೊಬ್ಬ....

'ಪಾನಿ ಪೂರಿ ವಾಲಾ'

★★★




ಇನ್ಸ್‌ಪೆಕ್ಟರ್: ಕಳ್ಳನನ್ನು ಬೆನ್ನತ್ತಿ ಹಿಡಿದು ತಂದ್ರಾ?

ಕಾನ್ಸ್‌ಟೇಬಲ್: ನಮ್ಮ ಸ್ಟೇಶನ್ ಲಿಮಿಟ್ ದಾಟಿದ ನಂತರ ತಪ್ಪಿಸಿಕೊಂಡು ಹೋದ ಸಾರ್, ಭಾರಿ ಕಿಲಾಡಿ ಸಾರ್ ಅವ್ನು....!

(ಸಂಗ್ರಹ) ಬಿ.ರಾಮಪ್ರಸಾದ ಭಟ್



ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265

ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೇದನ ಮುಂತಾದ

ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.

ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.

ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯಗಳನ್ನು ಗುಪ್ತವಾಗಿ ಇಡಲಾಗುವುದು.

ಆಫೀಸ: ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ ಎಫ್ 13, ಹೊಟೇಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.

ಮನೆ: ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.

0836-2282265
E-mail: mbjoshiastro@gmail.com